ಓ.ಎಸ್.346/2020
ಪಿ.ಡಬ್ಲ್ಯೂ-1

ದಿನಾಂಕಃ **14.07.2026**

ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎನ್.ಕೆ.ಜೆ. ವಕೀಲರಿಂದಃ

ನನ್ನ ಮತ್ತು 2 ನೇ ಪ್ರತಿವಾದಿಯ ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಮದುವೆಯನ್ನು ನನ್ನ ಸ್ವಂತ ಖರ್ಚಿನಿಂದ ನಾನೇ ಮಾಡಿಕೊಂಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನನ್ನ ಮದುವೆ ಶಿರಾ ತಾಲ್ಲೂಕು ಚಿಕ್ಕಬಾನಗೆರೆ ಗ್ರಾಮದಲ್ಲಿ ಮಾಡಿಕೊಂಡಿರುತ್ತೇನೆ. ಸದರಿ ದಿನದಂದು ನನ್ನ ಹೆಂಡತಿಯ ತಂಗಿ ಮದುವೆಯು ಸಹ ಆಗಿರುತ್ತದೆ. ಈ ಹಂತದಲ್ಲಿ ಸಾಕ್ಷಿಗೆ ಒಂದು ಮದುವೆಯ ಲಗ್ನ ಪತ್ರಿಕೆಯನ್ನು ತೋರಿಸಿದ್ದು ಸಾಕ್ಷಿ ಸದರಿ ಲಗ್ನ ಪತ್ರಿಕೆಯನ್ನು ನೋಡಿ ನನ್ನ ಮದುವೆಯ ಲಗ್ನ ಪತ್ರಿಕೆ ಎಂದು ಒಪ್ಪಿದ್ದರಿಂದ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ನಾನು ಡಿಪ್ಲಮೋ ಮತ್ತು ಜೆ.ಒ.ಸಿ ಆಧಾರದ ಮೇರೆಗೆ ಸುವರ್ಣ ಮುಖಿ ಕಾಲೇಜಿನಲ್ಲಿ ಅತಿಥಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದೇನು. ಈ ಹಂತದಲ್ಲಿ ಸಾಕ್ಷಿಗೆ ಎರಡು ಪರೀಕ್ಷೆಯ ಪ್ರವೇಶ ಪತ್ರಗಳನ್ನು ತೋರಿಸಿದ್ದು ಸಾಕ್ಷಿ ಸದರಿ ಪ್ರವೇಶ ಪತ್ರಗಳನ್ನು ನೋಡಿ ನನ್ನ ಪರೀಕ್ಷೆಯ ಪ್ರವೇಶ ಪತ್ರಗಳು ಎಂದು ಒಪ್ಪಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ2 ಮತ್ತು 3 ಎಂದು ಗುರುತಿಸಲಾಯಿತು. 2007 ರಿಂದ 2013 ರವರೆಗೆ ನನಗೆ ಜೀವನ ಸಾಗಿಸಲು ಸಾಕಷ್ಟು ಆಧಾಯ ಇಲ್ಲದೆ ಇದ್ದ ಕಾರಣ ನಾನು ನನ್ನ ತಂದೆಯ ಸಹಾಯ ಪಡೆದುಕೊಂಡು ಜೀವನ ನಡೆಸುತ್ತಿದ್ದೇನು ಎಂದು ಸೂಚಿಸುವುದು ಸರಿಯಲ್ಲ.

2. 2 ನೇ ಪ್ರತಿವಾದಿಯ ಮದುವೆಯನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿಗೆ ಮದುವೆಯಾಗಿರುವುದಿಲ್ಲ. ನಾನು ಸುಂದರಮ್

14/7/2026

ಕಂಪನಿಯನ್ನು ಬಿಟ್ಟ ನಂತರ ಟೈರ್ ಸೋಲ್ಸ್ ಕಂಪನಿಯಲ್ಲಿ ಸೇರಿಕೊಂಡಿರುತ್ತೇನೆ. ಸದರಿ ಕಂಪನಿಯಲ್ಲಿ ನಾನು ಕೆಲಸ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

3. 2011 ರಲ್ಲಿ ನನ್ನ ಮದುವೆಯಾದ ನಂತರ ನಾನು ಬೆಂಗಳೂರಿನಲ್ಲಿ ವಾಸವಾಗಿದ್ದೇನು. 2011 ರಿಂದ ನಾನು ನಮ್ಮ ಕುಟುಂಬದ ವ್ಯವಹಾರಗಳಲ್ಲಿ ಭಾಗವಹಿಸಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸರ್ವೆ.ನಂಬರ್.12/1 ಮತ್ತು ಸರ್ವೆ.ನಂಬರ್.12/2 ರಲ್ಲಿನ ಜಮೀನನ್ನು ನಾವು 2011 ರ ನಂತರ ಅಭಿವೃದ್ಧಿ ಪಡಿಸಿರುತ್ತೇವೆ ಸರ್ವೆ.ನಂಬರ್.12/2 ರಲ್ಲಿ ನಾವು ವಿ1 ಇಪ್ಪನೇರಳೆ ಪ್ರಾರಂಭಿಸಿರುತ್ತೇವೆ. ಯಾವ ವರ್ಷದಲ್ಲಿ ಪ್ರಾರಂಭಿಸಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ 2011 ರ ನಂತರ ಯಾವುದು ಪ್ರಾರಂಭಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ.

4. ದಾವಾ 4 ಮತ್ತು 5 ನೇ ಸ್ವತ್ತುಗಳನ್ನು ನನ್ನ ಆಧಾಯದಿಂದ ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ 4 ಮತ್ತು 5 ನೇ ಸ್ವತ್ತುಗಳನ್ನು ನನ್ನ ತಂದೆ ಅವರ ಸ್ವಂತ ಆಧಾಯದಿಂದ ಖರೀದಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

5. ದಾವಾ 1 ರಿಂದ 3, 6 ಮತ್ತು 7 ನೇ ಸ್ವತ್ತುಗಳು ನನ್ನ ತಂದೆಗೆ ವಿಭಾಗದಲ್ಲಿ ಬಂದಿರುತ್ತವೆ. ಸದರಿ ಸ್ವತ್ತುಗಳನ್ನು ನನ್ನ ತಂದೆ ಅಭಿವೃದ್ಧಿ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ಸ್ವತ್ತುಗಳಿಂದ ಬಂದ ಆಧಾಯದಿಂದ ನನ್ನ ತಂದೆ ನನ್ನ ಮತ್ತು ನನ್ನ ತಮ್ಮಂದಿರ ವಿಧ್ಯಾಭ್ಯಾಸ ಮಾಡಿಸಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಗೆ ಮದುವೆ ಮಾಡುವ ಜವಾಬ್ದಾರಿ ನನ್ನ ಮತ್ತು ನನ್ನ ತಂದೆಯ ಮೇಲೆ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ.

14/7/2026

ದಾವಾ ಸ್ವತ್ತುಗಳನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

14/7/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ